# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಂದಾಯ ಅಧಿಕಾರಿಗಳ ಕಛೇರಿ, ಗೋವಿಂದರಾಜನಗರ ವಿಭಾಗ, ಪಾಲಿಕೆ ಸೌಧ, 14ನೇ ಅಡ್ಡರಸ್ತೆ, 1ನೇ ಹಂತ, ಚಂದ್ರಾಬಡಾವಣೆ, ಬೆಂಗಳೂರು-560072.

ಸಂಖ್ಯೆ: ಕಂ.ಅ(ಗೋ.ನ)/ಪಿ.ಆರ್/25/2020 ದಿನಾಂಕ :07/11/2020

ದಿನಾಂಕ: 07.112020 ರಂದು ವಾರ್ಡ್ 126 ಮಾರುತಿ ಮಂದಿರ ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು:

ಹಾಜರಿದ್ದ ಅಧಿಕಾರಿಗಳು:

1. ಕಂದಾಯ ಅಧಿಕಾರಿ (ಗೋವಿಂದರಾಜನಗರ)
2. ಸಹಾಯಕ ಅಭಿಯಂತರರು ವಾರ್ಡ್ 126
3. ಎ ಎಸ್ ಐ ವಿಜಯನಗರ ಟ್ರಾಫಿಕ್ ಪೋಲಿಸ್ ಠಾಣೆ
4. ಹಿರಿಯ ಆರೋಗ್ಯ ಪರಿವೀಕ್ಷಕರು
5. ತೋಟಗಾರಿಕೆ ಪರಿವೀಕ್ಷಕರು
6. ಮೆಡಿಕಲ್ ಆಫೀಸರ್
7. ವಿನಾಯಕ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷರು
8. ಕಾರ್ಯದರ್ಶಿ ಕೆ ಹೆಚ್ ಬಿ, ಎಂ ಎಸ್ ಬಿಲ್ಡಿಂಗ್ ಓನರ್ಸ್ ವೆಲ್‌ಫೇರ್ ಸೊಸೈಟಿ.

ವಾರ್ಡ್‌ನ ಅಧ್ಯಕ್ಷರು ಸಭೆಗೆ ಹಾಜರಾದವರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

ಮೊಟ್ಟ ಮೊದಲನೇಯ ಸಭೆಯನ್ನು ಕರೆದಿರುವ ಪ್ರಯುಕ್ತ ಪ್ರತಿಯೊಬ್ಬ ರೆಸಿಡೆನ್ಸಿಷಿಯಲ್ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷರು ಅಧಿಕಾರಿಗಳನ್ನು ಪರಿಚಯ ಮಾಡಿಕೊಳ್ಳಲಾಯಿತು.

ವಾರ್ಡ್ 126 ಮಾರುತಿ ಮಂದಿರ ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ, ರಸ್ತೆಗುಂಡಿ ಮುಚ್ಚುವ ಬಗ್ಗೆ ಬೀದಿ ದೀಪಗಳ ನಿರ್ವಹಣೆ, ಮರಗಳ ರೆಂಬೆಗಳನ್ನು ಕಡಿಯುವ ಮತ್ತು ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ಸಂಬಂಧಿಸಿದಂತೆ ಹಾಗೂ ಇತರೆ ವಿಷಯಗಳ ಬಗ್ಗೆ ವಿಸ್ತಾರವಾಗಿ ಮಾತನಾಡಲು ಕರೆಯಲಾಯಿತು.

1. <u>ಬೀದಿ ನಾಯಿಗಳ ಬಗ್ಗೆ:</u>

ಶ್ರೀ ಶಿವಶಂಕರ್, ವಿನಾಯಕ ಲೇಔಟ್, RWA ಅಧ್ಯಕ್ಷರು ಮಾತನಾಡುತ್ತಾ ವಾರ್ಡ್ 126 ರಲ್ಲಿನ ಎಲ್ಲಾ ಬೀದಿಗಳಲ್ಲಿ ಬೀದಿ ನಾಯಿಗಳ ಹಾವಳಿ ಜಾಸ್ತಿಯಾಗಿದ್ದು ಇದರಿಂದ ಸಾರ್ವಜನಿಕರಿಗೆ ತೊಂದರೆ ಯಾಗುತ್ತಿರುವುದಾಗಿ ಹಿಂದಿನ ಸಭೆಯಲ್ಲಿ ತಿಳಿಸಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿದ್ದು ತದನಂತರ ಬೀದಿ ನಾಯಿಗಳಿಗೆ ಸಂತತಿ ಆಗದಂತೆ ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಿರುವ ಬಗ್ಗೆ ಮಾಹಿತಿಯನ್ನು ನೀಡಬೇಕೆಂದು ತಿಳಿಸಿರುವುದರಿಂದ ಇವುಗಳ ನಿಯಂತ್ರಣಕ್ಕಾಗಿ ಪಶುಪಾಲನಾ ವಿಭಾಗ ರವರು ಕ್ರಮ ವಹಿಸಬೇಕೆಂದು ಸೂಚಿಸಲಾಯಿತು.

ಕ್ರಮ: ಸಹಾಯಕ ನಿರ್ದೇಶಕರು
(ಪಶುಪಾಲನೆ)

2. <u>ಘನತ್ಯಾಜ್ಯ ನಿರ್ವಹಣೆ ವಿಭಾಗ:</u>

ವಾರ್ಡ್ 126, ಮಾರುತಿ ಮಂದಿರದ ಎಲ್ಲಾ ಬಡಾವಣೆಗಳಲ್ಲಿನ ರಸ್ತೆಗಳಲ್ಲಿ ಮತ್ತು ರಸ್ತೆಗಳ ಅಕ್ಕಪಕ್ಕಗಳಲ್ಲಿ ಔಷಧಿ ಸಿಂಪಡಣೆ (Sanitization) ಮಾಡುತ್ತಿಲ್ಲವೆಂದು ಈ ಹಿಂದಿನ ಸಭೆಯಲ್ಲಿ ತಿಳಿಸಿದ್ದರೂ ಸಹ ಯಾವುದೇ ಕ್ರಮ ಜರುಗಿಸಿರುವುದಿಲ್ಲವೆಂದು ಹಾಗೂ ಚಳಿಗಾಲವು ಪ್ರಾರಂಭವಾಗುವುದರಿಂದ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷರು ಪ್ರಸ್ತಾಪ ಮಾಡಿದಾಗ ವಾರ್ಡ್ 126ರ ಹಿರಿಯ ಆರೋಗ್ಯ ಪರಿವೀಕ್ಷಕರು ಮೇಲಾಧಿಕಾರಿಗಳ ಆದೇಶದಂತೆ ಸೆಪ್ಟೆಂಬರ್ ಮಾಹೆಯತನಕ ಔಷಧಿ ಸಿಂಪಡಿಸಿ, ಅಕ್ಟೋಬರ್ ಮಾಹೆಯಿಂದ ಸಿಂಪಡಣೆ ಮಾಡಬಾರದೆಂದು ತಿಳಿಸಿರುವುದರಿಂದ

Scanned by CamScanner

(Sanitization) ಮಾಡತ್ತಿಲ್ಲವೆಂದು ತಿಳಿಸಿರುವುದರಿಂದ ಎಲ್ಲಾ ಬಡಾವಣೆಗಳಲ್ಲಿ ಔಷಧಿ ಸಿಂಪಡಣೆ ಮಾಡಲು ಸೂಚಿಸಲಾಯಿತು.

ಕ್ರಮ: ಆರೋಗ್ಯ ವೈದ್ಯಾಧಿಕಾರಿ
ಸ.ಕಾ.ಪಾ.ಅ(ಘ.ತ್ಯಾ.ನಿ)
ಹಿಂ.ಆ.ಪ/ಕಿ.ಆ.ಪ

3. <u>ವಿದ್ಯುತ್ ಕಡಿತವಾಗುತ್ತಿರುವ ಬಗ್ಗೆ:</u>

ವಾರ್ಡ್ 126ರಲ್ಲಿ ಬೆಳಿಗ್ಗೆ ಸಮಯದಲ್ಲಿ ಹಲವಾರು ಭಾರೀ ಅನಿಯಮಿತವಾಗಿ ವಿದ್ಯುತ್ ಕಡಿತವಾಗುತ್ತಿರುವುದರಿಂದ ಮಕ್ಕಳ ಅನ್‌ಲೈನ್ ವಿದ್ಯಾಭ್ಯಾಸಕ್ಕೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಹಾಗೂ 19ನೇ ಅಡ್ಡರಸ್ತೆ, ಕೃತಿಕಾ ಅಪಾರ್ಟ್‌ಮೆಂಟ್ ಹತ್ತಿರ ಸುಮಾರು 15-16 ವರ್ಷಗಳ ಹಳೆಯ ಟ್ರಾನ್ಸ್‌ಫಾರ್ಮರ್ ಇದ್ದು ಆಗಾಗ ಕೆಟ್ಟುಹೋಗುತ್ತಿರುವುದರಿಂದ ದುರಸ್ತಿ ಮಾಡಿಸಿದರೂ ಸಹ ಕಾರ್ಯ ನಿರ್ವಹಿಸುವುದಿಲ್ಲವಾದ್ದರಿಂದ ಹೊಸದಾಗಿ ಟ್ರಾನ್ಸ್‌ಫಾರ್ಮರ್‌ನ್ನು ಅಳವಡಿಸುವಂತೆ, ಶ್ರೀ ಟಿ ರಾಮು KHB, MS Building Owner Welfare Assosiation Society, M C Layout ರವರು ಕೋರಿದರು.

ಕ್ರಮ: ಸ.ಕಾ.ಪಾ.ಅ(ವಿದ್ಯುತ್) BESCOM
ಸಹಾಯಕ ಅಭಿಯಂತರರು

4. <u>ಕೊಂಬೆಗಳನ್ನು ಕತ್ತರಿಸುವಿಕೆ: (ಅರಣ್ಯ ಇಲಾಖೆ)</u>

ವಾರ್ಡ್ 126ರಲ್ಲಿನ ಕೆನರಾ ಬ್ಯಾಂಕ್ ಕಾಲೋನಿ, ವಿನಾಯಕ ಬಡಾವಣೆ, ಮತ್ತು ಇತರೆ ಪ್ರದೇಶಗಳಲ್ಲಿನ ಬೀದಿ ಬದಿಯಲ್ಲಿನ ಮರದ ಕೊಂಬೆಗಳು ದೊಡ್ಡದಾಗಿ ಬೆಳೆದಿದ್ದು, ಇದರಿಂದ ತೊಂದರೆಯಾಗುತ್ತಿರುವುದರಿಂದ ಸದರಿ ಬಡಾವಣೆಗಳಲ್ಲಿನ ಮರದ ಕೊಂಬೆಗಳನ್ನು ಗುರುತಿಸಿ, ಮಾಲೀಕರಿಂದ ಪತ್ರ ಪಡೆದು, ನಿಯಾಮವಳಿಗಳಂತೆ, ಮರದ ಕೊಂಬೆಗಳನ್ನು ಕತ್ತರಿಸುವಲ್ಲಿ (Trimming of Trees) ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

ಕ್ರಮ: ವಲಯ ಅರಣ್ಯಾಧಿಕಾರಿಗಳು

5. <u>ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ:</u>

ವಾರ್ಡ್ 126 ರಲ್ಲಿನ ಕೆಲವು ರಸ್ತೆಗಳಲ್ಲಿ BWSSB ರವರಿಂದ ಬೋರ್‌ವೆಲ್‌ಗಳನ್ನು ಅಳವಡಿಸಲಾಗಿದ್ದು ಸದರಿ ಬೋರ್‌ವೆಲ್‌ಗಳಿಂದ ಮನೆಮನೆಗಳಿಗೆ ನೀರು ಸರಬರಾಜು ಆಗುತ್ತಿದ್ದು, ಈಗ ಮಳೆಗಾಲವು ಪ್ರಾರಂಭವಾಗಿದ್ದು ಬೋರ್‌ವೆಲ್‌ನ ನೀರು ಸರಬರಾಜು ಮೀಟರ್‌ಗೆ ತಿಂಗಳಿಗೆ ರೂ 200/- ಗಳಂತೆ, BWSSB ರವರು ನಿಗಧಿಪಡಿಸುತ್ತಿರುವುದರಿಂದ ಅದನ್ನು ತಡೆಯುವಂತೆ ಕ್ರಮ ವಹಿಸಲು ಸೂಚಿಸಲಾಯಿತು. 1ನೇ ಮುಖ್ಯರಸ್ತೆ, 4ನೇ ಮುಖ್ಯರಸ್ತೆ ವಿನಾಯಕ ಬಡಾವಣೆಯಲ್ಲಿ ಬೋರ್‌ವೆಲ್ ದುರಸ್ತಿಯಲ್ಲಿರುವುದನ್ನು ಸರಿಪಡಿಸಲು ಸೂಚಿಸಲಾಯಿತು.

ಕ್ರಮ: ಸ.ಕಾ.ನಿ.ಅ (BWSSB)
ಸಹಾಯಕ ಅಭಿಯಂತರರು

6. <u>Pot holes/ ಶೋಲ್ಡರ್ ಡ್ರೈನ್ ಸರಿಪಡಿಸುವಿಕೆ:</u>

ವಾರ್ಡ್ 126 ವ್ಯಾಪ್ತಿಯಲ್ಲಿ ಗುರುತಿಸಿರುವ ಪಾಟ್ ಹೋಲ್ಸ್ ಶೋಲ್ಡರ್ ಡ್ರೈನ್ ಸರಿಪಡಿಸಿರುವ ವಿವರಗಳನ್ನು ನೀಡಲು ಮುಂದಿನ ಸಭೆಯಲ್ಲಿ ಒದಗಿಸುವಂತೆ ಸೂಚಿಸಲಾಯಿತು.

ಕ್ರಮ: AEE (Chandralayout) (A E)

Scanned by CamScanner

7. (Public Toilet) ಸಾರ್ವಜನಿಕರ ಶೌಚಾಲಯ:

ವಾರ್ಡ್ 126ರ ಮಾರುತಿ ಮಂದಿರದಲ್ಲಿ ಎಷ್ಟು ಸಾರ್ವಜನಿಕರ ಶೌಚಾಲಯಗಳಿವೆ ಎಂಬುದರ ಮಾಹಿತಿಯನ್ನು ಮುಂದಿನ ಸಭೆಗೆ ಹಾಜರು ಪಡಿಸುವಂತೆ ತಿಳಿಸಲಾಯಿತು.

ಕ್ರಮ: ಸಾ.ಕಾ.ಪಾ.ಅ(ಚಂ.ಬ)
ಸಹಾಯಕ ಅಭಿಯಂತರರು

ಕೊನೆಯಲ್ಲಿ ಸಭೆಯಲ್ಲಿ ಪ್ರಸ್ತಾಪಿಸಿರುವ ವಿಷಯಗಳಿಗೆ ಸಂಬಂಧಿಸಿದಂತೆ ಕ್ರಮ ಕೈಗೊಂಡು ಕೈಗೊಂಡ ಕ್ರಮದ ಬಗ್ಗೆ ಮುಂದಿನ ಸಭೆಯಲ್ಲಿ ವರದಿ ಸಲ್ಲಿಸಿರುವಂತೆ ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

N. Uma 7/11/2020

(ಎನ್ ಉಮಾ)
ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ
ಹಾಗೂ ಕಂದಾಯ ಅಧಿಕಾರಿ
ಗೋವಿಂದರಾಜನಗರ
ವಾರ್ಡ್ 126, ಮಾರುತಿ ಮಂದಿರ

ಪ್ರತಿಯನ್ನು:

1. ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ಮಂಡಿಸಿದೆ.
2. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಮಂಡಿಸಿದೆ.
3. ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಕಳುಹಿಸುತ್ತಾ ಮುಂದಿನ ಸಭೆಯೊಳಗೆ ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಸಲ್ಲಿಸತಕ್ಕದ್ದು.
4. ಕಛೇರಿ ಕಡತಕ್ಕೆ.

Scanned by CamScanner